# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 926
ಸದಸ್ಯರ ಹೆಸರು : ಶ್ರೀ ಬಿ.ಕೆ. ಹರಿಪ್ರಸಾದ್ (ವಿಧಾನ ಸಭೆಯಿಂದ ಚುನಾಯಿತರಾದವರು)
ಉತ್ತರಿಸಬೇಕಾದ ದಿನಾಂಕ : 21.12.2021.
ಉತ್ತರಿಸುವವರು : ಪೌರಾಡಳಿತ, ಸಣ್ಣ ಕೈಗಾರಿಕೆ ಹಾಗೂ ಸಾರ್ವಜನಿಕ ಉದ್ಯಮಗಳ ಸಚಿವರು.

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ನಿರುದ್ಯೋಗ ಪದವೀಧರರು ಸ್ವಯಂ ಉದ್ಯೋಗ ಪ್ರಾರಂಭಿಸಲು ಸಿಗುವ ಸೌಲಭ್ಯಗಳೇನು; ಹಾಗೂ ಸಿಗುವ ರಿಯಾಯ್ತಿಗಳೇನು; (ಸಂಪೂರ್ಣ ಮಾಹಿತಿ ಒದಗಿಸುವುದು) | ನಿರುದ್ಯೋಗಿ ಪದವೀಧರರು ಸ್ವಯಂ ಉದ್ಯೋಗ ಪ್ರಾರಂಭಿಸಲು ಸಣ್ಣ ಕೈಗಾರಿಕೆಗಳನ್ನು ಪ್ರೋತ್ಸಾಹಿಸಲು ಸರ್ಕಾರವು ಈ ಕೆಳಗಿನ ಕಾರ್ಯಕ್ರಮಗಳನ್ನು ಜಾರಿಗೆ ತಂದಿರುತ್ತದೆ.<br>1. ಕೇಂದ್ರ ಸರ್ಕಾರದ ಪ್ರಧಾನಮಂತ್ರಿಗಳ ಉದ್ಯೋಗ ಸೃಜನ ಯೋಜನೆಯಡಿ ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸಲು ಗರಿಷ್ಠ ಸಾಲ ರೂ. 25 ಲಕ್ಷಗಳವರೆಗೆ ಬ್ಯಾಂಕ್‌ಗಳ ಮೂಲಕ ಸಾಲ ಸೌಲಭ್ಯ ಒದಗಿಸಿ ಸಣ್ಣ ಉದ್ಯಮಗಳನ್ನು ಸ್ಥಾಪಿಸಿ ಸ್ವಯಂಉದ್ಯೋಗ ಕೈಗೊಳ್ಳಲು ಅನುಕೂಲ ಒದಗಿಸಲಾಗುವುದು ಹಾಗೂ ಯೋಜನಾ ವೆಚ್ಚದ ಮೇಲೆ ಶೇ. 15 ರಿಂದ ಶೇ.35 ರವರೆಗೆಗರಿಷ್ಠ ರೂ.3.75 ಲಕ್ಷದಿಂದ ರೂ.8.75 ಲಕ್ಷದವರೆಗೆ ಸಹಾಯಧನ ನೀಡಲಾಗುತ್ತಿದೆ.<br>2. ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯ ಮೂಲಕ ಸೂಕ್ಷ್ಮ ಮತ್ತು ಸಣ್ಣ ಕೈಗಾರಿಕೆಗಳು ಸ್ಥಾಪಿಸಲು ರೂ.5.00 ಕೋಟಿಗಳವರೆಗೆ ಸಾಲ ಪಡೆದು ನಿಗದಿತ ಸಮಯದಲ್ಲಿ ಮರುಪಾವತಿ ಮಾಡಿದ ಅತಿ ಸಣ್ಣ ಮತ್ತು ಸಣ್ಣ ಕೈಗಾರಿಕಾ ಘಟಕಗಳಿಗೆ 5 ವರ್ಷಗಳ ಅವಧಿಗೆ ಶೇಕಡ 6 ರಂತೆ ಬಡ್ಡಿ ಸಹಾಯಧನ ನೀಡಲಾಗುವುದು.<br>3. ಪರಿಶಿಷ್ಟ ಜಾತಿಯ ಮತ್ತು ಪರಿಶಿಷ್ಟ ಪಂಗಡದ ಉದ್ಯಮಶೀಲರಿಗೆ ವಿಶೇಷ ಘಟಕ ಉಪಯೋಜನೆ ಮತ್ತು ಗಿರಿಜನ ಉಪ ಯೋಜನೆಯಡಿಯಲ್ಲಿ ಶೇ 75 ರಿಯಾಯಿತಿ ದರದಲ್ಲಿ ಕೈಗಾರಿಕಾ ನಿವೇಶನಗಳನ್ನು ಮತ್ತು ಕೈಗಾರಿಕಾ ಶೆಡ್‌ಗಳನ್ನು ನೀಡಲಾಗುತ್ತಿದೆ.<br>4. ಪರಿಶಿಷ್ಟ ಜಾತಿಯ ಮತ್ತು ಪರಿಶಿಷ್ಟ ಪಂಗಡದ ಉದ್ಯಮಶೀಲರಿಗೆ ವಿಶೇಷ ಘಟಕ ಉಪ ಯೋಜನೆ ಮತ್ತು ಗಿರಿಜನ ಉಪ ಯೋಜನೆಯಡಿಯಲ್ಲಿ ಸ್ವಯಂ ಉದ್ಯೋಗ ಕೈಗೊಳ್ಳಲು ಬ್ಯಾಂಕಿನಿಂದ ಸಾಲ ಒದಗಿಸಿ ಯೋಜನಾ ವೆಚ್ಚದ ಮೇಲೆ ಶೇ 60 ರಷ್ಟುಗರಿಷ್ಠ ರೂ.5.00 ಲಕ್ಷ ಸಹಾಯಧನ |

| | | |
|---|---|---|
| | | ನೀಡಲಾಗುತ್ತಿದೆ.<br><br>5. ಪರಿಶಿಷ್ಟ ಜಾತಿಯ ಮತ್ತು ಪರಿಶಿಷ್ಟ ಪಂಗಡದ ಮೊದಲ ಪೀಳಿಗೆಯ ಉದ್ಯಮಿದಾರರು ಬ್ಯಾಂಕ್/ ಹಣಕಾಸು ಸಂಸ್ಥೆಗಳಿಂದ ಸಾಲ ಪಡೆದು ಸ್ಥಾಪಿಸುವ ಹೊಸ ಘಟಕಗಳಿಗೆ ಗರಿಷ್ಠ ರೂ.5.00 ಕೋಟಿ ಯೋಜನಾ ವೆಚ್ಚದಲ್ಲಿ The Debt Equity Ratio 2:1 ಪ್ರಕಾರ (2/3 ರಷ್ಟು ಬ್ಯಾಂಕ್/ ಹಣಕಾಸು ಸಂಸ್ಥೆಗಳಿಂದ ಸಾಲ ಮತ್ತು 1/3 ಪ್ರವರ್ತಕರ ಬಂಡವಾಳ)ಘಟಕಕ್ಕೆ ಪ್ರವರ್ತಕ ಬಂಡವಾಳ ಹೂಡಿಕೆಯ 1/3 ರಲ್ಲಿ ಶೇ.50 ರಷ್ಟು ಬಡ್ಡಿರಹಿತ ಗರಿಷ್ಟ ರೂ.75 ಲಕ್ಷ ಸಾಫ್ಟ್ ಸೀಡ್ ಕ್ಯಾಪಿಟಲ್ ಆರ್ಥಿಕ ಸಹಾಯ ನೀಡಲಾಗುತ್ತಿದೆ.<br><br>6. ಕರ್ನಾಟಕ ರಾಜ್ಯ ಕೈಗಾರಿಕಾ ನೀತಿ 2020-25 ರಂತೆ ಕೆಳಕಾಣಿಸಿದ ಪ್ರೋತ್ಸಾಹ ಮತ್ತು ರಿಯಾಯಿತಿ ಸೌಲಭ್ಯಗಳನ್ನು ಅರ್ಹ ಕೈಗಾರಿಕೆಗಳಿಗೆ ನೀಡಿ ಉತ್ತೇಜಿಸಲಾಗುತ್ತಿದೆ.<br>1. ಮುದ್ರಾಂಕ ಶುಲ್ಕ ವಿನಾಯಿತಿ<br>2. ನೋಂದಣಿ ಶುಲ್ಕ ರಿಯಾಯಿತಿ.<br>3. ಬಂಡವಾಳ ಹೂಡಿಕೆ ಸಹಾಯಧನ<br>4. ಕಿರು ಮತ್ತು ಸಣ್ಣ ಕೈಗಾರಿಕೆಗಳಿಗೆ ವಿದ್ಯುತ್ ಸಹಾಯಧನ<br>5. ಭೂ ಪರಿವರ್ತನಾ ಶುಲ್ಕ ಮರುಪಾವತಿ.<br>6. ರಫ್ತು ಆಧಾರಿತ ಘಟಕಗಳಿಗೆ ರಿಯಾಯಿತಿ.<br>7. ತ್ಯಾಜ್ಯ ಸಂಸ್ಕರಣಾ ಘಟಕಗಳ ಸ್ಥಾಪನೆಗೆ ಸಹಾಯಧನ.<br>8. ವಿದ್ಯುತ್‌ತೆರಿಗೆ ವಿನಾಯಿತಿ<br>9. ತಾಂತ್ರಿಕ ಉನ್ನತೀಕರಣ, ಗುಣಮಟ್ಟ ಪ್ರಮಾಣ ಪತ್ರ ಸಹಾಯಧನ<br>10. ಮಳೆ ನೀರುಕೊಯ್ಲು / ಸಂರಕ್ಷಣೆ ಸಹಾಯಧನ<br>11. ತಂತ್ರಜ್ಞಾನ ಉನ್ನತೀಕರಣಕ್ಕೆ ಬಡ್ಡಿ ಸಹಾಯಧನ |
| ಆ) | ಪದವೀಧರರು ಸ್ವಂತ ಉದ್ದಿಮೆ ಸ್ಥಾಪಿಸಲು ಮುಂದೆ ಬಂದಲ್ಲಿ, ಅವರಿಗೆ ಅವಶ್ಯವಿರುವ ಜಮೀನನ್ನು ಸರ್ಕಾರ ಒದಗಿಸುವುದೇ; ಅದಕ್ಕಿರುವ ಷರತ್ತುಗಳೇನು; ಯಾವ ಯಾವ ರೀತಿಯ ಪ್ರೋತ್ಸಾಹ ಮತ್ತು ಸಹಾಯ ನೀಡಲಿದೆ; | ಪದವೀಧರರು ಸ್ವಂತ ಉದ್ದಿಮೆ ಸ್ಥಾಪಿಸಲು ಮುಂದೆ ಬಂದಲ್ಲಿ ಅವರಿಗೆ ಅವಶ್ಯವಿರುವ ಜಮೀನನ್ನು ಸರ್ಕಾರವು ಕರ್ನಾಟಕ ರಾಜ್ಯ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ/ ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮದ ಮೂಲಕ ಲಭ್ಯತೆಯ ಆಧಾರದ ಮೇಲೆ, ಯೋಜನೆಯ ಆಧಾರದ ಮೇಲೆ ಹಂಚಿಕೆ ಮಾಡಲಾಗುವುದು.<br><br>ಕೈಗಾರಿಕೆಗಳನ್ನು ಸ್ಥಾಪಿಸಲು ಬಯಸುವ ಉದ್ಯಮಶೀಲರು ಯೋಜನಾ ವೆಚ್ಚವನ್ನು ಆಧರಿಸಿ ನಿವೇಶನಕ್ಕಾಗಿ ಮತ್ತು ಯೋಜನೆಯ ಅನುಮೋದನೆಗಾಗಿ ನಿಗದಿತ ನಮೂನೆಯಲ್ಲಿ ಅರ್ಜಿಯನ್ನು ಸಲ್ಲಿಸಬೇಕು. ಇದರಲ್ಲಿ ಕೈಗಾರಿಕೆ ಪ್ರಾರಂಭಿಸಲು ಅಗತ್ಯವಿರುವ ನಿವೇಶನದ ಕೈಗಾರಿಕಾ ಪ್ರದೇಶ/ ಕೈಗಾರಿಕಾ |

<table>
<tr><td></td><td></td><td>
ವಸಾಹತುಗಳ ವಿವರಗಳನ್ನು ನಮೂದಿಸಬೇಕು.

<table>
<tr><th>ಯೋಜನಾವೆಚ್ಚ</th><th>ಸಮಿತಿ</th><th>ಅರ್ಜಿ ಸಲ್ಲಿಸಬೇಕಾದ ಕಛೇರಿ</th></tr>
<tr><td>ರೂ.15 ಕೋಟಿವರೆಗೆ</td><td>ಜಿಲ್ಲಾ ಮಟ್ಟದ ಏಕಗವಾಕ್ಷಿ ಸಮಿತಿ</td><td>ಜಂಟಿ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ಕೇಂದ್ರ, ಸಂಬಂಧಿಸಿದ ಜಿಲ್ಲೆ.</td></tr>
<tr><td>ರೂ.15 ಕೋಟಿ ಮೇಲ್ಪಟ್ಟು ರೂ.500 ಕೋಟಿವರೆಗೆ</td><td>ರಾಜ್ಯ ಮಟ್ಟದ ಏಕ ಗವಾಕ್ಷಿ ಸಮಿತಿ</td><td>ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಉದ್ಯೋಗ ಮಿತ್ರ, ಬೆಂಗಳೂರು</td></tr>
</table>

ಈ ಸಮಿತಿಗಳು ಉದ್ಯಮಶೀಲರು ಸಲ್ಲಿಸಿದ ಅರ್ಜಿಯನ್ನು ಪರಿಶೀಲಿಸಿ ಸಂಬಂಧಿಸಿದ ಸಮಿತಿಯಲ್ಲಿ ಅಗತ್ಯವಿರುವ ವಿಸ್ತೀರ್ಣದ ನಿವೇಶನವನ್ನು ಹಂಚಿಕೆ ಮಾಡಲು ಕರ್ನಾಟಕ ರಾಜ್ಯ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ/ ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮಕ್ಕೆ ಶಿಫಾರಸ್ಸು ಮಾಡುವರು. ನಂತರ ಈ ಸಂಸ್ಥೆಗಳು ನಿವೇಶನಗಳನ್ನು ಲೀಸ್ ಕಂ ಸೇಲ್ ಆಧಾರದ ಮೇಲೆ ನಿವೇಶನಗಳ ಲಭ್ಯತೆಯನ್ನು ಪರಿಶೀಲಿಸಿ ಹಂಚಿಕೆ ಮಾಡುವರು.
ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮದ ಮೂಲಕ ನಿವೇಶನ ಹಂಚಿಕೆಗೆ ಇರುವ ಮಾನದಂಡಗಳನ್ನು ಅನುಬಂಧ-1 ರಲ್ಲಿ ನೀಡಲಾಗಿದೆ.

ಪರಿಶಿಷ್ಟ ಜಾತಿಯ ಮತ್ತು ಪರಿಶಿಷ್ಟ ಪಂಗಡದ ಉದ್ಯಮಶೀಲರಿಗೆ ವಿಶೇಷ ಘಟಕ ಉಪಯೋಜನೆ ಮತ್ತು ಗಿರಿಜನ ಉಪ ಯೋಜನೆಯಡಿಯಲ್ಲಿ ಶೇ 75 ರಿಯಾಯಿತಿ ದರದಲ್ಲಿ ಕೈಗಾರಿಕಾ ನಿವೇಶನಗಳನ್ನು ಮತ್ತು ಶೇ 90 ರಿಯಾಯಿತಿ ದರದಲ್ಲಿ ಕೈಗಾರಿಕಾ ಶೆಡ್‌ಗಳನ್ನು ನೀಡಲಾಗುತ್ತಿದೆ.
ಕೈಗಾರಿಕೆಗಳನ್ನು ಸ್ಥಾಪಿಸಿದ ನಂತರ ಅನುಬಂಧ-1 ರಲ್ಲಿ ನೀಡಿರುವಂತೆ ಕೈಗಾರಿಕಾ ನೀತಿ 2020-25 ರನ್ವಯ ವಿವಿಧ ಪ್ರೋತ್ಸಾಹ ಮತ್ತು ರಿಯಾಯಿತಿಗಳನ್ನು ನೀಡಲಾಗುತ್ತದೆ.
</td></tr>
<tr><td>ಇ)</td><td>ಈಗಾಗಲೇ ಸ್ವಂತ ಉದ್ದಿಮೆ ಸ್ಥಾಪಿಸಿದವರಿಗೆ ನೀಡುವ ಸೌಲಭ್ಯ ರಿಯಾಯ್ತಿ ಪ್ರೋತ್ಸಾಹಗಳೇನು? (ಸಂಪೂರ್ಣ ಮಾಹಿತಿ ಒದಗಿಸುವುದು)</td><td>ಸ್ವಂತ ಉದ್ದಿಮೆ ಸ್ಥಾಪಿಸಿದವರಿಗೆ ಕೈಗಾರಿಕಾ ನೀತಿ 2020-25 ರನ್ವಯ ಪ್ರೋತ್ಸಾಹ ಮತ್ತು ರಿಯಾಯಿತಿಗಳ ವಿವರಗಳನ್ನು ಅನುಬಂಧ-2ರಲ್ಲಿ ನೀಡಲಾಗಿದೆ.</td></tr>
</table>

**ಸಿಐ 222 ಸಿಎಸ್‌ಸಿ 2021**

(ಎನ್. ನಾಗರಾಜು (ಎಂ.ಟಿ.ಬಿ))
ಪೌರಾಡಳಿತ ಮತ್ತು ಸಣ್ಣ ಕೈಗಾರಿಕೆ
ಹಾಗೂ ಸಾರ್ವಜನಿಕ ಉದ್ದಿಮೆಗಳ ಸಚಿವರು.

**ಅನುಬಂಧ-1**

## ಶ್ರೀ ಬಿ.ಕೆ. ಹರಿಪ್ರಸಾದ್ (ವಿಧಾನ ಸಭೆಯಿಂದ ಚುನಾಯಿತರಾದವರು) ಇವರ ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ 926ಗೆ

### ಕೆ.ಎಸ್.ಎಸ್.ಐ.ಡಿ.ಸಿ. ನಿಗಮದಿಂದ ನಿರ್ಮಿಸಿರುವ ಮಳಿಗೆ ಹಾಗೂ ನಿವೇಶನಗಳ ಹಂಚಿಕೆಗಾಗಿ ಇರುವ ಮಾನದಂಡಗಳು

1. ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ ವತಿಯಿಂದ ಸಣ್ಣ ಉದ್ದಿಮೆದಾರರುಗಳಿಗೆ ಅವರ ಯೋಜನೆಗಳನ್ನು ಅನುಷ್ಠಾನಗೊಳಿಸಲು ಅನುವಾಗುವಂತೆ ಕೈಗಾರಿಕಾ ಮಳಿಗೆ/ನಿವೇಶನಗಳನ್ನು ಹಂಚಿಕೆ ಮಾಡಲು ತನ್ನದೇ ಆದ ಮಳಿಗೆ/ನಿವೇಶನಗಳ ಹಂಚಿಕೆ ನಿಯಮಗಳು-2004 ಅನ್ನು ರೂಪಿಸಿಕೊಂಡಿದ್ದು, ಅದರಂತೆ, ಮಳಿಗೆ/ನಿವೇಶನಗಳ ಹಂಚಿಕೆ ಮಾಡಲು ಅನುಸರಿಸುತ್ತಿರುವ ಮಾನದಂಡಗಳು ಈ ಕೆಳಕಂಡಂತಿರುತ್ತವೆ.
2. ಮಳಿಗೆ/ನಿವೇಶನಗಳ ಹಂಚಿಕೆ ಸಲುವಾಗಿ ನಿಗಮವು ಸರ್ಕಾರದ ಹೊಸ ಕೈಗಾರಿಕಾ ನೀತಿ 2020--25ರಂತೆ ಹಂಚಿಕೆ ಮೀಸಲಾತಿ ಅಳವಡಿಸಿಕೊಂಡಿದ್ದು, ಅದರಂತೆ,
3. ಪರಿಶಿಷ್ಟ ಜಾತಿ & ಪರಿಶಿಷ್ಟ ಪಂಗಡ – 22.65%, ಮಹಿಳಾ ಉದ್ಯಮಿಗಳು – 5.00%, ಅಲ್ಪಸಂಖ್ಯಾತರು, ವಿಕಲಚೇತನರು, ಹಿಂದುಳಿದ ವರ್ಗ (ವರ್ಗ-1 & 2ಎ) ಮಾಜಿ ಸೈನಿಕರು – 10.00% ಇರುತ್ತದೆ.
4. ಆಸಕ್ತ ಸಣ್ಣ ಉದ್ದಿಮೆದಾರರುಗಳು ನಿಗದಿತ ಅರ್ಜಿ ನಮೂನೆಯನ್ನು ವೆಬ್‌ಸೈಟ್ ಮುಖೇನವಾಗಲೀ ಅಥವಾ ನಿಗಮದ ಸಂಬಂಧಪಟ್ಟ ಕಛೇರಿಗಳಿಂದ ಪಡೆದು ನಿಗದಿತ ಅರ್ಜಿ ಶುಲ್ಕ, ಪರಿಶೀಲನಾ ಶುಲ್ಕ ಹಾಗೂ ಮಳಿಗೆ/ನಿವೇಶನಗಳ ಮೌಲ್ಯದ ಮೇಲೆ ನಿಗಧಿಪಡಿಸಿರುವಂತೆ ಅನ್ವಯವಾಗುವ ಮುಂಗಡ ಠೇವಣಿ ಹಣದೊಂದಿಗೆ ಮತ್ತು ಅವಶ್ಯ ದಾಖಲಾತಿಗಳೊಂದಿಗೆ ಸಲ್ಲಿಸಬೇಕಿರುತ್ತದೆ.
5. ಅರ್ಜಿದಾರರು ಸಲ್ಲಿಸಿದ ದಾಖಲೆಗಳ ಆಧಾರದ ಮೇಲೆ ಅಂಕಗಳನ್ನು ನೀಡಿ ಈ ಅಂಕಗಳ ಆಧಾರದ ಮೇಲೆ ಜೇಷ್ಠತಾ ಪಟ್ಟಿಯನ್ನು ತಯಾರಿಸಿ ಸಕ್ಷಮ ಪ್ರಾಧಿಕಾರದ ಅನುಮೋದನೆ ಪಡೆದು ಹಂಚಿಕೆಗೆ ಪರಿಗಣಿಸಲಾಗುತ್ತದೆ, ಮಾನದಂಡಗಳ ಪ್ರಕಾರ ಈ ಕೆಳಕಂಡ ಪೂರಕ ದಾಖಲೆಗಳನ್ನು ಕಡ್ಡಾಯವಾಗಿ ಸಲ್ಲಿಸಬೇಕಾಗಿರುತ್ತದೆ.

- ಉದ್ದೇಶಿತ ಕೈಗಾರಿಕೆಯ ವಿವರವಾದ ಯೋಜನಾ ವರದಿ.
- ಅರ್ಜಿದಾರರು ಈಗಾಗಲೇ ಕೈಗಾರಿಕೆ ನಡೆಸುತ್ತಿದ್ದಲ್ಲಿ, ಸಂಬಂಧಪಟ್ಟ ದಾಖಲೆಗಳು
- ಅರ್ಜಿದಾರರು ಸ್ಥಳೀಯರಾಗಿದ್ದಲ್ಲಿ, ಕರ್ನಾಟಕದಲ್ಲಿ 10 ವರ್ಷಕ್ಕಿಂತ ಹೆಚ್ಚು ಅವಧಿ ವಾಸಿಸುತ್ತಿರುವ ಬಗ್ಗೆ ಕಂದಾಯ ಇಲಾಖೆಯಿಂದ ದೃಢೀಕರಣ ಪತ್ರ (Domicile Certificate),ಪಾಲುದಾರಿಕೆ/ಪ್ರೈವೇಟ್ ಲಿಮಿಟೆಡ್ ಕಂಪನಿಯಾದಲ್ಲಿ, ಪಾಲುದಾರರ/ನಿರ್ದೇಶಕರ ವಾಸಿಸುತ್ತಿರುವ ಪ್ರಮಾಣ ಪತ್ರ.
- ಯೋಜನಾ ಬಂಡವಾಳ ಹೂಡಿಕೆಗೆ ಇರುವ ಸಾಮರ್ಥ್ಯವನ್ನು ತೋರಿಸಲು ಬ್ಯಾಂಕಿನಿಂದ/ಹಣಕಾಸು ಸಂಸ್ಥೆಯಿಂದ ಸಾಲ ಮಂಜೂರಾತಿ ಒಪ್ಪಿಗೆ ಪತ್ರ ಅಥವಾ ಠೇವಣಿಗಳನ್ನು ಹೊಂದಿದ್ದಲ್ಲಿ, ಈ ಬಗ್ಗೆ ಬ್ಯಾಂಕಿನ ಪ್ರಮಾಣ ಪತ್ರ, ಹಾಗೂ ಸಾಲವೆನ್ನಿ ಪ್ರಮಾಣ ಪತ್ರ
- ಉದ್ಯೋಗ ಕಲ್ಪಿಸುವ ಸಾಮರ್ಥ್ಯ.
- ಉದ್ದೇಶಿತ ಉತ್ಪಾದನೆಯು ರಫ್ತು ಮಾಡುವ ವಸ್ತು, ಆಮದು ಮಾಡಿಕೊಳ್ಳುವ ವಸ್ತುವಿಗೆ ಪರ್ಯಾಯ ವಸ್ತುವಾಗಿದ್ದಲ್ಲಿ, ಸ್ಥಳೀಯ ಸಂಪನ್ಮೂಲಗಳನ್ನು ಬಳಸುವ ಕೈಗಾರಿಕೆ/ ಬೃಹತ್ ಮತ್ತು ಮಧ್ಯಮ ಕೈಗಾರಿಕೆಗಳಿಗೆ ಪರ್ಯಾಯ/ಹೈಟೆಕ್ ಕೈಗಾರಿಕೆಗಳು ಆಗಿದ್ದಲ್ಲಿ, ಅವುಗಳನ್ನು ಸ್ಪಷ್ಟೀಕರಿಸುವ ದಾಖಲೆಗಳು.
- ಮಾಲಿನ್ಯ ರಹಿತ ವಸ್ತುವಿನ ಉತ್ಪಾದನೆಯಾದಲ್ಲಿ, ಸದರಿ ಉತ್ಪಾದನೆಯನ್ನು ತೋರಿಸುವ ದಾಖಲೆಗಳು.
- ಅರ್ಜಿದಾರರು ಪ್ರಥಮ ತಲೆಮಾರಿನವರಾಗಿದ್ದಲ್ಲಿ ಸಂಬಂಧಿಸಿದ ದಾಖಲೆಗಳು.
- ಪ್ರಸ್ತುತ ಯೋಜನೆಯು ಸಿ.ಜಿ.ಟಿ.ಎಂ.ಎಸ್.ಇ.(CREDIT GUARANTEE FUND TRUST FOR MICRO AND SMALL ENTERPRISES) ಇವರಿಗೆ ಸಲ್ಲಿಸಿದ್ದಲ್ಲಿ, ಅದರ ವಿವರಗಳು.
- ಪ್ರಸ್ತುತ ಯೋಜನೆಯು ಸಿ.ಜಿ.ಟಿ.ಎಂ.ಎಸ್.ಇ. ಗ್ಯಾರಂಟಿ ಅಡಿ ಇದ್ದಲ್ಲಿ, ಅದಕ್ಕೆ ಸಂಬಂಧಿಸಿದ ದಾಖಲೆಗಳು.
- ರೂ. 100 ಲಕ್ಷಗಳಿಗಿಂತ ಹೆಚ್ಚಿನ ಯೋಜನಾ ಬಂಡವಾಳ ಹೂಡಿಕೆ ಸಾಮರ್ಥ್ಯ ಹೊಂದಿರುವ ಯೋಜನೆ ಆಗಿದ್ದಲ್ಲಿ, ಅದಕ್ಕೆ ಸಂಬಂಧಿಸಿದ ದಾಖಲೆಗಳು.
- ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದವರಿಗೆ ಸರ್ಕಾರದ ಕೈಗಾರಿಕಾ ನೀತಿ ಅನ್ವಯ ಹಾಗೂ ನಿಗಮದ ಹಂಚಿಕೆ ನಿಯಮಾವಳಿಗಳನ್ವಯ ಶೇಕಡವಾರು ಮೀಸಲಾತಿ ಪಡೆಯುವುದರಿಂದ, ಮೂಲ ಜಾತಿ ಪ್ರಮಾಣ ಪತ್ರ.

<u>ಅನುಬಂಧ-2</u>

## ಶ್ರೀ ಬಿ.ಕೆ. ಹರಿಪ್ರಸಾದ್ (ವಿಧಾನ ಸಭೆಯಿಂದ ಚುನಾಯಿತರಾದವರು) ಇವರ ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ 926

## ಹೊಸ ಕೈಗಾರಿಕಾ ನೀತಿ 2020-25 ರಡಿಯಲ್ಲಿ ಎಂ.ಎಸ್.ಎಂ.ಇ ಗಳಿಗೆ ದೊರೆಯುವ ಪ್ರೋತ್ಸಾಹ ಮತ್ತು ರಿಯಾಯಿತಿಗಳು:

<table>
<tr><th>ಉತ್ತೇಜನದ ಮಾದರಿ</th><th>ಸಾಮಾನ್ಯ ಪ್ರವರ್ಗ</th><th>ವಿಶೇಷ ಪ್ರವರ್ಗ (ಪ.ಜಾತಿ/ಪ.ಪಂ, ಮಹಿಳೆಯರು,ಅಲ್ಪಸಂಖ್ಯಾತರು, ವಿಕಲಾಂಗರು ಹಾಗೂ ಮಾಜಿಉದ್ಯಮಶೀಲ ಸೈನಿಕರು.</th></tr>
<tr><td rowspan="2">ಸೂಕ್ಷ್ಮ ಮತ್ತು ಸಣ್ಣ ಕೈಗಾರಿಕೆಗಳಿಗೆ ಹೂಡಿಕೆ ಉತ್ತೇಜನಾ ಸಹಾಯಧನ</td><td>ಸೂಕ್ಷ್ಮ ಕೈಗಾರಿಕೆಗಳು<br>ವಲಯ 1: ವಿಎಫ್‌ಎಯ 30% (ಗರಿಷ್ಠ ರೂ.25ಲಕ್ಷ)<br>ವಲಯ 2: ವಿಎಫ್‌ಎಯ 25% (ಗರಿಷ್ಠ ರೂ.20ಲಕ್ಷ)<br>ವಲಯ 3: ಇಲ್ಲ<br><br>ಸಣ್ಣ ಕೈಗಾರಿಕೆಗಳು<br>ವಲಯ 1: ವಿಎಫ್‌ಎಯ 25% (ಗರಿಷ್ಠ ರೂ.100ಲಕ್ಷ)<br>ವಲಯ 2: ವಿಎಫ್‌ಎಯ 20% (ಗರಿಷ್ಠ ರೂ.90ಲಕ್ಷ)<br>ವಲಯ 3: ಇಲ್ಲ<br><br>ವಿಎಫ್‌ಎ -ಸ್ಥಿರಾಸ್ತಿಯ ಮೌಲ್ಯ</td><td>ಸೂಕ್ಷ್ಮ ಕೈಗಾರಿಕೆಗಳು<br>ವಲಯ 1: ವಿಎಫ್‌ಎಯ 35% (ಗರಿಷ್ಠ ರೂ.30ಲಕ್ಷ)<br>ವಲಯ 2: ವಿಎಫ್‌ಎಯ 30% (ಗರಿಷ್ಠ ರೂ.25ಲಕ್ಷ)<br>ವಲಯ 3: ವಿಎಫ್‌ಎನ 10% (ಗರಿಷ್ಠ ರೂ.10ಲಕ್ಷ)<br><br>ಸಣ್ಣ ಕೈಗಾರಿಕೆಗಳು<br>ವಲಯ 1: ವಿಎಫ್‌ಎಯ 30% (ಗರಿಷ್ಠ ರೂ.105ಲಕ್ಷ)<br>ವಲಯ 2: ವಿಎಫ್‌ಎಯ 25% (ಗರಿಷ್ಠ ರೂ.95ಲಕ್ಷ)<br>ವಲಯ 3: ವಿಎಫ್‌ಎನ 10% (ಗರಿಷ್ಠ ರೂ.25ಲಕ್ಷ)<br><br>ವಲಯ 1 ಮತ್ತು 2 ರಲ್ಲಿ ವಿಎಫ್‌ಎಯ 5% ಹೆಚ್ಚುವರಿ ಸಬ್ಸಿಡಿ ಗರಿಷ್ಠ ರೂ.5 ಲಕ್ಷ</td></tr>
<tr><td colspan="2">ಸೂಚನೆ:<br>ಸೂಕ್ಷ್ಮ ಮತ್ತು ಸಣ್ಣ ಕೈಗಾರಿಕೆಗಳು ಪ್ರತೀ ಆರ್ಥಿಕ ವರ್ಷದಲ್ಲಿ ವಹಿವಾಟಿನ ಶೇ.10 ರಷ್ಟು ಹೂಡಿಕೆ ಉತ್ತೇಜನ ಸಬ್ಸಿಡಿಯನ್ನು ಪಡೆಯಬಹುದು ಮತ್ತು ಈ ಸಹಾಯಧನವನ್ನು ವಾಣಿಜ್ಯ ಉತ್ಪಾದನೆ ಆರಂಭಿಸಿದ ದಿನಾಂಕದಿಂದ ಗರಿಷ್ಠ 5 ಆರ್ಥಿಕ ವರ್ಷಗಳವರೆಗೆ ವಿಸ್ತರಿಸಬಹುದು. ಇಂತಹ ಸಂಚಿತ ಹೂಡಿಕೆ ಉತ್ತೇಜನಾ ಸಬ್ಸಿಡಿಯು ಮೇಲ್ಕಾಣಿಸಿದ ಗರಿಷ್ಠ ಮಿತಿಗೆ ಒಳಪಟ್ಟಿರುತ್ತದೆ. ಈ ಹೂಡಿಕೆ ಉತ್ತೇಜನಾ ಸಬ್ಸಿಡಿಯ ಮಿತಿಯು ಅವಧಿ ಮುಗಿಯುವವರೆಗೆ (5ಆರ್ಥಿಕ ವರ್ಷಗಳವರೆಗೆ )ಅಥವಾ ಮಿತಿ ಮುಗಿಯುವವರೆಗೆ ಯಾವುದು ಮೊದಲೋ ಅಲ್ಲಿವರೆಗೆ ಅನ್ವಯವಾಗುತ್ತದೆ ಮತ್ತು ಇದನ್ನು ಮುಂದೂಡುವಂತಿಲ್ಲ.</td></tr>
<tr><td>ಮಧ್ಯಮ ಕೈಗಾರಿಕೆಗಳಿಗೆ ಹೂಡಿಕೆ ಉತ್ತೇಜನಾ ಸಬ್ಸಿಡಿ<br><br>ಮೊದಲ 10 ಕೋಟಿ ರೂಗಳಿಗೆ ಕನಿಷ್ಠ ಉದ್ಯೋಗಾವಕಾಶ ಸಂಖ್ಯೆ 20 ಮತ್ತು ಮುಂದಿನ ಹೆಚ್ಚುವರಿ ಪ್ರತೀ ರೂ.10 ಕೋಟಿಗೆ ಹೆಚ್ಚುವರಿ 7 ಉದ್ಯೋಗಾವಕಾಶ ಪ್ರಮಾಣಾನುಪಾತದಂತೆ</td><td colspan="2">ಮಧ್ಯಮ ಕೈಗಾರಿಕೆಗಳು<table><tr><th>ವಲಯ</th><th>ಶೇಕಡಾವಾರು ವಹಿವಾಟು</th><th>ಗರಿಷ್ಠ ಅವಧಿ (ವರ್ಷ)</th><th>ವಿಎಫ್‌ಎ ಮಿತಿ</th></tr><tr><td>1</td><td rowspan="2">2.50%</td><td>6</td><td>ವಿಎಫ್‌ಎಯ 40 %</td></tr><tr><td>2</td><td>5</td><td>ವಿಎಫ್‌ಎಯ 35 %</td></tr><tr><td>3</td><td colspan="3">ಇಲ್ಲ</td></tr></table>ಸೂಚನೆ:<br>ಮಧ್ಯಮ ಕೈಗಾರಿಕೆಗಳು ಹೂಡಿಕೆ ಉತ್ತೇಜನ ಸಬ್ಸಿಡಿಯನ್ನು ಪ್ರತೀ ಆರ್ಥಿಕ ವರ್ಷದಲ್ಲಿ ವಹಿವಾಟಿನ ಶೇಕಡಾವಾರು ಪಡೆಯಬಹುದಾಗಿದ್ದು ಮೇಲ್ಕಾಣಿಸಿದಂತೆ ವಾಣಿಜ್ಯ ಉತ್ಪಾದನೆ ಆರಂಭಿಸಿದ ಗರಿಷ್ಠ ಅವಧಿಗೆ ಅನ್ವಯವಾಗುವುದು. ಇಂತಹ ಸಂಚಿತ ಹೂಡಿಕೆ ಉತ್ತೇಜನಾ ಸಬ್ಸಿಡಿಯು ವಿಎಫ್‌ಎ ಮಿತಿ ಅಥವಾ ಅವಧಿ ಮುಗಿಯುವವರೆಗೆ ಯಾವುದು ಮೊದಲೋ ಅಲ್ಲಿವರೆಗೆ ಅನ್ವಯವಾಗುತ್ತದೆ ಮತ್ತು ಇದನ್ನು ಮುಂದೂಡುವಂತಿಲ್ಲ.<br>ಕಡಿಮೆ ಉದ್ಯೋಗಾವಕಾಶ ಒದಗಿಸಲು ಬಯಸುವ ಮಧ್ಯಮ ಕೈಗಾರಿಕೆಗಳು/ಹೂಡಿಕೆಗೆ ತಕ್ಕಂತೆ ನಿಗದಿಪಡಿಸಿದ ಉದ್ಯೋಗಾವಕಾಶ ನೀಡಲು ಸಾಧ್ಯವಾಗದ ಕೈಗಾರಿಕೆಗಳಿಗೆ ಒಟ್ಟು ಒದಗಿಸಿದ ಉದ್ಯೋಗಾವಕಾಶಕ್ಕೆ ಅನುಗುಣವಾಗಿ ವಹಿವಾಟು ಶೇಕಡಾವಾರು ಪ್ರಮಾಣ ಕಡಿಮೆ ಆಗುವುದು. ಹೀಗಿದ್ದರೂ ಗರಿಷ್ಠ ಅವಧಿ ಮತ್ತು ವಿಎಫ್‌ಎ ಮೇಲ್ಕಂಡಂತೆ ಇರಲಿದೆ.</td></tr>
<tr><td>ಎಂಎಸ್‌ಎಂಇಗಳಿಗೆ ಸ್ಟಾಂಪ್ ಶುಲ್ಕ(ಡ್ಯೂಟಿ) ವಿನಾಯಿತಿ</td><td colspan="2">ಸ್ಟಾಂಪ್ ಶುಲ್ಕ ವಿನಾಯಿತಿ ಮತ್ತು ನೋಂದಣಿ ಶುಲ್ಕದಲ್ಲಿ ರಿಯಾಯಿತಿ:<br>ರಾಜ್ಯ ಹಣಕಾಸು ನಿಗಮ, ರಾಷ್ಟ್ರಮಟ್ಟದ ಹಣಕಾಸು ಸಂಸ್ಥೆಗಳು,ವಾಣಿಜ್ಯ ಬ್ಯಾಂಕ್‌ಗಳು ಪ್ರಾದೇಶಿಕ ಗ್ರಾಮೀಣ ಬ್ಯಾಂಕ್‌ಗಳು, ಸಹಕಾರಿ ಬ್ಯಾಂಕ್‌ಗಳು, ಖಾದಿ ಮತ್ತು ಗ್ರಾಮೀಣ ಕೈಗಾರಿಕೆ ಮಂಡಳಿ, ಖಾದಿ ಮತ್ತು ಗ್ರಾಮೀಣ ಕೈಗಾರಿಕೆ ಆಯೋಗ(ಕಮಿಷನ್), ಕರ್ನಾಟಕ ರಾಜ್ಯ ಪ.ಜಾತಿ/ಪ.ವರ್ಗ ಅಭಿವೃದ್ಧಿ ನಿಗಮ, ಕರ್ನಾಟಕ ರಾಜ್ಯ ಅಲ್ಪಸಂಖ್ಯಾತ ಅಭಿವೃದ್ಧಿ ನಿಗಮ ಮತ್ತಿತರ ಸಂಸ್ಥೆಗಳಿಂದ ಸಾಲ ಪಡೆಯಲಿಕ್ಕಾಗಿ ಸಾಲ ಒಪ್ಪಂದ, ಸಾಲ ಕರಾರು ಪತ್ರ, ಅಡಮಾನ, ಅಡಮಾನಿಕೆ ದಸ್ತಾವೇಜುಗಳಿಗಾಗಿ ಸರ್ಕಾರ ಕಾಲಾನುಕ್ರಮವಾಗಿ ಹೊರಡಿಸುವ ಅಧಿಸೂಚನೆಗಳಿಗೆ ಅನುಗುಣವಾಗಿ ನೀಡಬೇಕಾದ ಸ್ಟಾಂಪ್ ಶುಲ್ಕದಿಂದ ಆರಂಭದ 5 ವರ್ಷಗಳ ಕಾಲ ಮಾತ್ರ ವಿನಾಯಿತಿ ನೀಡಲಾಗುವುದು.<br><br>ಕೈಗಾರಿಕೋದ್ಯಮಿಗಳು, ಕೈಗಾರಿಕಾ ನಿವೇಶನ, ಷೆಡ್‌ಗಳು, ಕೈಗಾರಿಕಾ ಟೆನೆಮೆಂಟ್ಸ್ ಮತ್ತು ಬಹುಮಹಡಿ ಸಂಕೀರ್ಣದ ಕಾರ್ಖಾನೆಗಳನ್ನು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ, ಕರ್ನಾಟಕ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ, ಕಿಯಾನಿಕ್ಸ್, ಕೈಗಾರಿಕಾ ಸಹಕಾರ ಸಂಘಗಳು, ಅನುಮೋದಿತ ಖಾಸಗಿ ಕೈಗಾರಿಕಾ ವಸಾಹತುಗಳು/ಪಾರ್ಕ್‌ಗಳು, ಆಹಾರ ಪಾರ್ಕ್‌ಗಳು, ಕರ್ನಾಟಕ/ಭಾರತ ಸರ್ಕಾರದಿಂದ ರಚಿಸಲಾದ ವಿಶೇಷ ಉದ್ದೇಶ ವಾಹನ(ಎಸ್/ಪಿ.ವಿ)ಗಳಿಂದ ಹಂಚಿಕೆ ಪಡೆಯುವಲ್ಲಿ ಕೈಗಾರಿಕಾ ಉದ್ದಿಮೆಗಳು ಮಾಡಿಕೊಂಡ ಭೋಗ್ಯ ಪತ್ರ (ಲೀಸ್ ಡೀಡ್ಸ್), ಭೋಗ್ಯ ಮತ್ತು ಕ್ರಯ ಪತ್ರ, ಉಪ-ಭೋಗ್ಯ(ಸಬ್ ಲೀಸ್) ಹಾಗೂ</td></tr>
</table>

| ಉತ್ತೇಜನದ ಮಾದರಿ | ಸಾಮಾನ್ಯ ಪ್ರವರ್ಗ | ವಿಶೇಷ ಪ್ರವರ್ಗ (ಪ.ಜಾತಿ/ಪ.ಪಂ, ಮಹಿಳೆಯರು,ಅಲ್ಪಸಂಖ್ಯಾತರು, ವಿಕಲಾಂಗರು ಹಾಗೂ ಮಾಜಿಉದ್ಯಮಶೀಲ ಸೈನಿಕರು. |
|---|---|---|
| | ಪರಿಪೂರ್ಣ ಕ್ರಯ ಪತ್ರಗಳಿಗೂ ಈ ಕೆಳಗಿನಂತೆ ವಿನಾಯಿತಿ ನೀಡಬೇಕು. | |
| | ವಲಯ 1 : 100%<br>ವಲಯ 2 : 100%<br>ವಲಯ 3 : ಇಲ್ಲ | ವಲಯ 1 : 100%<br>ವಲಯ 2 : 100%<br>ವಲಯ 3 : 75% |
| ಎಂಎಸ್ಎಂಇಗಳಿಗೆ ನೋಂದಣಿ ಶುಲ್ಕದಲ್ಲಿ ರಿಯಾಯಿತಿ | ವಲಯ1, ವಲಯ 2 : ರೂ.1000/-ಕ್ಕೆ ರೂ.1/-<br>ವಲಯ 3 : ಇಲ್ಲ | ಎಲ್ಲಾ ವಲಯಗಳಿಗೆ :ರೂ.1000/-ಕ್ಕೆ ರೂ.1/- |
| | ಸೂಚನೆ:<br>*1.* ಸ್ಟಾಂಪ್ ಶುಲ್ಕ ವಿನಾಯಿತಿ ಮತ್ತು ನೋಂದಣಿ ಶುಲ್ಕ ರಿಯಾಯಿತಿಗಳು ಕೆಎಲ್ಆರ್ ಕಾಯ್ದೆ 1961ರ ಸೆಕ್ಷನ್ 109ರ ಅಡಿಯಲ್ಲಿ ಖರೀದಿಸಿದ ಭೂಮಿ, ಹಾಗೂ ಎಸ್ಎಲ್ಡಬ್ಲ್ಯುಸಿಸಿ/ಡಿಎಲ್ಡಬ್ಲ್ಯುಸಿಸಿ ಅನುಮೋದಿತ ಯೋಜನೆಗಳ ಕೈಗಾರಿಕಾ ಭೂಪರಿವರ್ತಿತ ಭೂಮಿಯ ನೇರ ಖರೀದಿಗೂ ಅನ್ವಯವಾಗುವುದು. ಸ್ವಾಧೀನಪಡಿಸಿಕೊಂಡ ಭೂಮಿಗೆ ಪರಿಹಾರವಾಗಿ ಕೆಐಎಡಿಬಿ ಭೂ ಮಾಲೀಕರಿಗೆ ನೀಡುವ ಭೂಮಿಗೂ ಈ ರಿಯಾಯಿತಿ/ವಿನಾಯಿತಿ ನೀಡಲಾಗುವುದು.<br>*2.* ಭೂಮಿ,ಕೈಗಾರಿಕಾ ನಿವೇಶನ, ಷೆಡ್‌ಗಳು, ಕೈಗಾರಿಕಾ ಟೆನ್‌ಮೆಂಟ್ಸ್‌ಗಳಿಗೆಭೋಗ್ಯದ ಅವಧಿ ಮುಗಿದ ಬಳಿಕ ಅಂತಿಮ ಕ್ರಯ ಪತ್ರ (ಸೇಲ್ ಡೀಡ್)ದ ನೋಂದಣಿಗೂ ಕೈಗಾರಿಕಾ ನೀತಿಯಲ್ಲಿ ನಮೂದಿಸಿರುವಂತೆ ಭೋಗ್ಯ ಮತ್ತು ಕ್ರಯಪತ್ರ (ಲೀಸ್ ಕಮ್ ಸೇಲ್ ಡೀಡ್) ಮಾಡುವ ವೇಳೆ ಚಾಲ್ತಿಯಲ್ಲಿದ್ದ ಪ್ರಕಾರ ಸ್ಟಾಂಪ್ ಶುಲ್ಕ ವಿನಾಯ್ತಿ ಮತ್ತು ನೋಂದಣಿ ಶುಲ್ಕಗಳಲ್ಲಿ ರಿಯಾಯ್ತಿ ಲಭ್ಯವಾಗುವುದು. | |
| ಎಂಎಸ್ಎಂಇಗಳಿಗೆ ಭೂ ಪರಿವರ್ತನಾ ಶುಲ್ಕ ಮರುಪಾವತಿ | ವಲಯ 1 : 100%<br>ವಲಯ 2 : 100%<br>ವಲಯ 3 : ಇಲ್ಲ | ವಲಯ 1 : 100%<br>ವಲಯ 2 : 100%<br>ವಲಯ 3 : 75% |
| ಎಂಎಸ್ಎಂಇಗಳಿಗೆ ವಿದ್ಯುತ್‌ಶುಲ್ಕದ ಮೇಲಿನ ತೆರಿಗೆ ವಿನಾಯಿತಿ | ವಲಯ 1 : 100% 7 ವರ್ಷದವರೆಗೆ<br>ವಲಯ 2 : 100% 6 ವರ್ಷದವರೆಗೆ<br>ವಲಯ 3 : ಇಲ್ಲ | ವಲಯ1 : 100% 8 ವರ್ಷದವರೆಗೆ<br>ವಲಯ 2 : 100% 7 ವರ್ಷದವರೆಗೆ<br>ವಲಯ 3 : 100% 4 ವರ್ಷದವರೆಗೆ |
| ಸೂಕ್ಷ್ಮ ಮತ್ತು ಸಣ್ಣ ಕೈಗಾರಿಕೆಗಳಿಗೆ ವಿದ್ಯುತ್‌ಚ್ಛಕ್ತಿ ಸಬ್ಸಿಡಿ | **ವಲಯ 1 ಮತ್ತು 2ಕ್ಕೆ ಮಾತ್ರ:** ಬಳಸಿದ ಪ್ರತಿ ವಿದ್ಯುತ್ ಯುನಿಟ್ ಒಂದಕ್ಕೆ ಪಾವತಿಸಿದ ವಿದ್ಯುತ್ ಶುಲ್ಕಕ್ಕೆ ರೂ.1/-ರಂತೆ 3 ವರ್ಷಗಳ ಅವಧಿವರೆಗೆ ವಿದ್ಯುತ್‌ಚ್ಛಕ್ತಿ ಸಬ್ಸಿಡಿ. | |
| ಕುಶಲಕರ್ಮಿಗಳಿಗೆ ಬೆಂಬಲ | 1. ಕುಶಲಕರ್ಮಿಗಳಿಗೆ ಶೇ. 4% ಬಡ್ಡಿದರದಲ್ಲಿ ಅವಧಿ ಸಾಲ(ಟರ್ಮ್ ಲೋನ್) ಮತ್ತು ದುಡಿಮೆ ಬಂಡವಾಳ ಸಾಲ.<br>2. ಕುಶಲಕರ್ಮಿಗಳ ಕರಕುಶಲ ವಸ್ತುಗಳ ವಹಿವಾಟಿನ ಮೇಲೆ ಶೇ. 10%ರಷ್ಟು ಮಾರುಕಟ್ಟೆ ಅಭಿವೃದ್ಧಿ ನೆರವು (ಎಂಡಿಎ)<br>3. ಕರಕುಶಲ ಸಂಘಟನೆಗಳಿಗೆ, ಕರಕುಶಲ ಕಾಂಪ್ಲೆಕ್ಸ್‌ಗಳಿಗೆ,ಸಮೂಹ ಮೊದಲಾದವುಗಳಿಗೆ ಯಂತ್ರೋಪಕರಣಗಳು,ಬಿಡಿ ಭಾಗಗಳಿಗೆ 75% ಅನುದಾನ | |

| ಎಂಎಸ್ಎಂಇಗಳಿಗೆ ತಂತ್ರಜ್ಞಾನ ಅಳವಡಿಕೆ ಮತ್ತು ನವೋನ್ವೇಷಣೆ | | |
|---|---|---|
| | ಸಾಮಾನ್ಯ ಪ್ರವರ್ಗ | ವಿಶೇಷ ಪ್ರವರ್ಗ (ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ, ಮಹಿಳೆಯರು, ಅಲ್ಪಸಂಖ್ಯಾತರು, ವಿಕಲಾಂಗರು & ಮಾಜಿ ಸೈನಿಕ ಉದ್ಯಮಿಗಳು) |
| ತಂತ್ರಜ್ಞಾನ ಮೇಲ್ದರ್ಜೆಗೇರಿಸುವ ಸಾಲದ ಮೇಲೆ ಬಡ್ಡಿ ಸಹಾಯಧನ | ವಲಯ1 : 5% 6 ವರ್ಷದವರೆಗೆ *<br>ವಲಯ 2 : 5% 5 ವರ್ಷದವರೆಗೆ *<br>ವಲಯ 3 : 5% 5 ವರ್ಷದವರೆಗೆ *<br><br>* ಭಾರತ ಸರ್ಕಾರದ ಸಿಎಲ್‌ಸಿಎಸ್‌ಎಸ್(ಕ್ರೆಡಿಟ್ ಲಿಂಕ್ಡ್ ಕ್ಯಾಪಿಟಲ್ ಸಬ್ಸಿಡಿ ಸ್ಕೀಂ-ಸಾಲ ಸಂಯೋಜಿತ ಬಂಡವಾಳ ಸಹಾಯಧನ ಯೋಜನೆ) ಅಡಿಯಲ್ಲಿ ಒಳಗೊಂಡಿರದ ಕೆಎಸ್‌ಎಫ್‌ಸಿ ಮತ್ತು ಅನುಸೂಚಿತ (ಷೆಡ್ಯೂಲ್ಡ್) ವಾಣಿಜ್ಯ ಬ್ಯಾಂಕ್‌ಗಳಿಂದ ಪಡೆದ ಸಾಲಗಳಿಗೆ | ವಲಯ 1 : 5% 6 ವರ್ಷದವರೆಗೆ *<br>ವಲಯ 2 : 5% 5 ವರ್ಷದವರೆಗೆ *<br>ವಲಯ 3 : 5% 5 ವರ್ಷದವರೆಗೆ *<br><br>* ಭಾರತ ಸರ್ಕಾರದ ಸಿಎಲ್‌ಸಿಎಸ್‌ಎಸ್(ಕ್ರೆಡಿಟ್ ಲಿಂಕ್ಡ್ ಕ್ಯಾಪಿಟಲ್ ಸಬ್ಸಿಡಿ ಸ್ಕೀಂ-ಸಾಲ ಸಂಯೋಜಿತ ಬಂಡವಾಳ ಸಹಾಯಧನ ಯೋಜನೆ) ಅಡಿಯಲ್ಲಿ ಒಳಗೊಂಡಿರದ ಕೆಎಸ್‌ಎಫ್‌ಸಿ ಮತ್ತು ಅನುಸೂಚಿತ (ಷೆಡ್ಯೂಲ್ಡ್) ವಾಣಿಜ್ಯ ಬ್ಯಾಂಕ್‌ಗಳಿಂದ ಪಡೆದ ಸಾಲಗಳಿಗೆ |
| ತಂತ್ರಜ್ಞಾನ ಅಳವಡಿಕೆಗೆ | **ಎಲ್ಲಾ ವಲಯಗಳಿಗೆ**<br>ವೆಚ್ಚದ 25% (ಗರಿಷ್ಟ ರೂ.50,000/-) ಅನುಬಂಧ 8ರಲ್ಲಿ ಉಲ್ಲೇಖಿಸಲಾದ ಭಾರತ ಸರ್ಕಾರದ ಮಾನ್ಯತೆ ಪಡೆದ ಪ್ರಯೋಗಾಲಯಗಳಿಂದ ತಂತ್ರಜ್ಞಾನ ಅಳವಡಿಸಿದ್ದಕ್ಕಾಗಿ | **ಎಲ್ಲಾ ವಲಯಗಳಿಗೆ**<br>ವೆಚ್ಚದ 50% (ಗರಿಷ್ಠ ರೂ.1 ಲಕ್ಷ )ಅನುಬಂಧ 8ರಲ್ಲಿ ಉಲ್ಲೇಖಿಸಲಾದ ಭಾರತ ಸರ್ಕಾರದ ಮಾನ್ಯತೆ ಪಡೆದ ಪ್ರಯೋಗಾಲಯಗಳಿಂದ ತಂತ್ರಜ್ಞಾನ ಅಳವಡಿಸಿದ್ದಕ್ಕಾಗಿ . |

| ಎಂಎಸ್ಎಂಇಗಳಿಗೆ ತಂತ್ರಜ್ಞಾನ ಅಳವಡಿಕೆ ಮತ್ತು ನವೋನ್ವೇಷಣೆ | | |
|---|---|---|
| | ಸಾಮಾನ್ಯ ಪ್ರವರ್ಗ | ವಿಶೇಷ ಪ್ರವರ್ಗ (ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ, ಮಹಿಳೆಯರು, ಅಲ್ಪಸಂಖ್ಯಾತರು, ವಿಕಲಾಂಗರು & ಮಾಜಿ ಸೈನಿಕ ಉದ್ಯಮಿಗಳು) |
| ತಂತ್ರಜ್ಞಾನ ವ್ಯವಹಾರ ವಿಕಸನ ಕೇಂದ್ರ (ಟಿಬಿಐಸಿ) | ಎಲ್ಲಾ ವಲಯಗಳಿಗೆ<br>ವಿಕಸನ ಕೇಂದ್ರ (ಇನ್‌ಕ್ಯುಬೇಷನ್ ಕೇಂದ್ರ)ದ ವೆಚ್ಚದ 25% (ಗರಿಷ್ಠ ರೂ.50.00 ಲಕ್ಷ) (ವಲಯ 1 ರಲ್ಲಿ ಕನಿಷ್ಠ 1 ಟಿಬಿಐಸಿ ) | ಎಲ್ಲಾ ವಲಯಗಳಿಗೆ<br>ವಿಕಸನ ಕೇಂದ್ರ (ಇನ್‌ಕ್ಯುಬೇಷನ್ ಕೇಂದ್ರ)ದ ವೆಚ್ಚದ 25% (ಗರಿಷ್ಠರೂ.60.00 ಲಕ್ಷ)(ವಲಯ 1 ರಲ್ಲಿ ಕನಿಷ್ಠ 1 ಟಿಬಿಐಸಿ ) |
| ಗುಣಮಟ್ಟ ಪ್ರಮಾಣೀಕರಣಕ್ಕೆ ಉತ್ತೇಜನ | ಎಲ್ಲಾ ವಲಯಗಳಿಗೆ<br>ಐಎಸ್ಒ ಸರಣಿ ಪ್ರಮಾಣೀಕರಣ ವೆಚ್ಚದ 75%<br>(ಗರಿಷ್ಠ ರೂ.75,000)<br>ಬಿಐಎಸ್ ಪ್ರಮಾಣೀಕರಣ: ಬಿಐಎಸ್(ಬ್ಯೂರೋ ಆಫ್ ಇಂಡಿಯನ್ ಸ್ಟಾಂಡರ್ಡ್)ಗೆ ಪಾವತಿ ಮಾಡಬೇಕಾದ ಶುಲ್ಕದ 50% (ಗರಿಷ್ಠ ರೂ.20,000/-) & 25% ವೆಚ್ಚ (ಗರಿಷ್ಠ ರೂ.50,000/-)ಬಿಐಎಸ್ ಅನುಮೋದಿಸಿದಂತೆ ಪರೀಕ್ಷಾ ಉಪಕರಣ ಖರೀದಿಗೆ | ಎಲ್ಲಾ ವಲಯಗಳಿಗೆ<br>ಐಎಸ್ಒ ಸರಣಿ ಪ್ರಮಾಣೀಕರಣ ವೆಚ್ಚದ 75%<br>(ಗರಿಷ್ಠ ರೂ.1,00,000)<br>ಬಿಐಎಸ್ ಪ್ರಮಾಣೀಕರಣ: ಬಿಐಎಸ್(ಬ್ಯೂರೋ ಆಫ್ ಇಂಡಿಯನ್ ಸ್ಟಾಂಡರ್ಡ್)ಗೆ ಪಾವತಿ ಮಾಡಬೇಕಾದ ಶುಲ್ಕದ 50% (ಗರಿಷ್ಠ ರೂ.25,000/-) & 25% ವೆಚ್ಚ (ಗರಿಷ್ಠ ರೂ.1,00,0000/—)ಬಿಐಎಸ್ ಅನುಮೋದಿಸಿದಂತೆ ಪರೀಕ್ಷಾ ಉಪಕರಣ ಖರೀದಿಗೆ |
| | ಮಹಿಳಾ ಮಾಲೀಕತ್ವದ ವಾಣಿಜ್ಯ ಉದ್ಯಮ(ಡಬ್ಲ್ಯುಬಿಇ) ವೀಕನೆಕ್ಟ್ ಪ್ರಮಾಣೀಕರಣ, ಎಲ್ಲಾ ವಲಯಗಳಿಗೆ<br>3 ವರ್ಷಗಳ ಅವಧಿವರೆಗೆ ಗರಿಷ್ಠ ರೂ.75,000/-<br>ಪ್ರಮಾಣಪತ್ರ ಶುಲ್ಕದ 100% ಮೊದಲ ವರ್ಷಕ್ಕೆ –ಗರಿಷ್ಠ ರೂ.30,000/-<br>ಪ್ರಮಾಣಪತ್ರ ಶುಲ್ಕದ 90% ಎರಡನೇ ವರ್ಷಕ್ಕೆ-ಗರಿಷ್ಠ ರೂ.27,000/-<br>ಪ್ರಮಾಣಪತ್ರ ಶುಲ್ಕದ 80% ಮೂರನೇ ವರ್ಷಕ್ಕೆ ಗರಿಷ್ಠ ರೂ 18,000/- | |

| ಎಂಎಸ್ಎಂಇಗಳ ಸುಸ್ಥಿರತೆ ಮತ್ತು ಜವಾಬ್ದಾರಿಯುತ ಕೈಗಾರಿಕೀಕರಣ | | |
|---|---|---|
| ಯಾವ ರೀತಿಯ ಬೆಂಬಲ | ಸಾಮಾನ್ಯ ಪ್ರವರ್ಗ | ವಿಶೇಷ ಪ್ರವರ್ಗ: (ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡ, ಮಹಿಳೆಯರು, ಅಲ್ಪಸಂಖ್ಯಾತರು, ವಿಕಲಾಂಗರು & ಮಾಜಿ ಸೈನಿಕ ಉದ್ಯಮಿಗಳು) |
| ಮಳೆ ನೀರು ಕೊಯ್ಲು | ಎಲ್ಲಾ ವಲಯಗಳಿಗೆ<br>ಉಪಕರಣದ ಬೆಲೆಯ 50% (ಗರಿಷ್ಠ ರೂ.2 ಲಕ್ಷ ) | ಎಲ್ಲಾ ವಲಯಗಳಿಗೆ<br>ಉಪಕರಣದ ಬೆಲೆಯ 75% (ಗರಿಷ್ಠ ರೂ.2.50 ಲಕ್ಷ ) |
| ತ್ಯಾಜ್ಯ ನೀರು ಸಂಸ್ಕರಣೆ | ಎಲ್ಲಾ ವಲಯಗಳಿಗೆ<br>ಉಪಕರಣದ ಬೆಲೆಯ 50% (ಗರಿಷ್ಠ ರೂ.7.50 ಲಕ್ಷ) | ಎಲ್ಲಾ ವಲಯಗಳಿಗೆ<br>ಉಪಕರಣದ ಬೆಲೆಯ 75% (ಗರಿಷ್ಠ ರೂ.8.50 ಲಕ್ಷ ) |
| ನೀರಿನ ಲೆಕ್ಕ ಪರಿಶೋಧನೆ(ಆಡಿಟ್)ಗೆ ತಗುಲಿದ ವೆಚ್ಚ ಮರುಪಾವತಿ | ಎಲ್ಲಾ ವಲಯಗಳಿಗೆ<br>75% ಗರಿಷ್ಠ ರೂ.1ಲಕ್ಷ ಪ್ರತೀ ನೀರಿನ ಆಡಿಟ್‌ಗೆ (ಒಂದು ಬಾರಿಗೆ) | ಎಲ್ಲಾ ವಲಯಗಳಿಗೆ<br>75% ಗರಿಷ್ಠ ರೂ.1ಲಕ್ಷ ಪ್ರತೀ ನೀರಿನ ಆಡಿಟ್‌ಗೆ (ಒಂದು ಬಾರಿಗೆ) |
| ಘನ್ಯ ತ್ಯಾಜ್ಯ/ ಹೊರಸೂಸುವಿಕೆ | ಎಲ್ಲಾ ವಲಯಗಳಿಗೆ<br>ಉಪಕರಣದ ಬೆಲೆಯ 50% (ಗರಿಷ್ಠ ರೂ.7.50ಲಕ್ಷ) | ಎಲ್ಲಾ ವಲಯಗಳಿಗೆ<br>ಉಪಕರಣದ ಬೆಲೆಯ 75% (ಗರಿಷ್ಠ ರೂ.8.50ಲಕ್ಷ) |
| ಇಲೆಕ್ಟ್ರಾನಿಕ್ ತ್ಯಾಜ್ಯ ಮತ್ತು ಪ್ಲಾಸ್ಟಿಕ್ ತ್ಯಾಜ್ಯ ಗಳ ಮರುಬಳಕೆ | ಎಲ್ಲಾ ವಲಯಗಳಿಗೆ<br>ವಿಎಫ್‌ಎನ ಶೇ.5ರಷ್ಟು (ಗರಿಷ್ಠ ರೂ.10ಲಕ್ಷ) | ಎಲ್ಲಾ ವಲಯಗಳಿಗೆ<br>ವಿಎಫ್‌ಎನ ಶೇ.5ರಷ್ಟು (ಗರಿಷ್ಠ ರೂ.12ಲಕ್ಷ) |
| ತ್ಯಾಜ್ಯ ಸಂಸ್ಕರಣಾ ಘಟಕ(ಇಟಿಪಿ) ಸ್ಥಾಪನೆಗೆ ಸಹಾಯಧನ | ಎಲ್ಲಾ ವಲಯಗಳಿಗೆ<br>ಇಟಿಪಿಯವೆಚ್ಚದ ಶೇ.50 ರಷ್ಟು (ಗರಿಷ್ಠ ರೂ.50 ಲಕ್ಷ) | ಎಲ್ಲಾ ವಲಯಗಳಿಗೆ<br>ಇಟಿಪಿಯ ವೆಚ್ಚದ ಶೇ.75 ರಷ್ಟು (ಗರಿಷ್ಠ ರೂ.60 ಲಕ್ಷ) |

| ರಫ್ತು ಕೈಗಾರಿಕೆಗಳು | |
|---|---|
| ಯಾವ ರೀತಿಯ ಬೆಂಬಲ | ಎಲ್ಲಾ ಪ್ರವರ್ಗಗಳಿಗೆ |
| ವಿದ್ಯುತ್ ತೆರಿಗೆ ವಿನಾಯಿತಿ | ಹೊಸ ಎಂಎಸ್ಎಂಇ ರಫ್ತು ಉದ್ದಿಮೆಗೆ ವಲಯ 3 ರಲ್ಲಿ ಮೊದಲ 5 ವರ್ಷಗಳವರೆಗೆ 100% ವಿದ್ಯುತ್ ತೆರಿಗೆ ವಿನಾಯಿತಿ (ಒಟ್ಟು ವಹಿವಾಟಿನ ಶೇ.50ರಷ್ಟು ರಫ್ತು ಇರಬೇಕು). |
| ಕಾರ್ಯನಿರ್ವಹಣಾ ಸಬ್ಸಿಡಿ | ತಮ್ಮ ರಫ್ತನ್ನು ಮುಂದಿನ ವರ್ಷಗಳಲ್ಲಿ ದ್ವಿಗುಣಗೊಳಿಸುವ ಎಂಎಸ್ಎಂಇ ಕೈಗಾರಿಕೆಗಳಿಗೆ ಎಲ್ಲಾ ವಲಯಗಳಲ್ಲಿ ಎಫ್‌ಒಬಿಯ 1% ಮೌಲ್ಯವನ್ನು ಪಾವತಿಸಲಾಗುವುದು. ಗರಿಷ್ಠ ಮಿತಿ ರೂ.10. ಲಕ್ಷ/ಘಟಕವೊಂದಕ್ಕೆ |
| ಬ್ಯಾಂಕ್ ಶುಲ್ಕ | ಎಲ್ಲಾ ವಲಯಗಳಲ್ಲಿ ಎಂಎಸ್ಎಂಇ ಕ್ಷೇತ್ರದ ಎಲ್ಲಾ ರಫ್ತಿನ ಇಬಿಆರ್‌ಸಿ ಪ್ರಸ್ತುತಪಡಿಸಿದಲ್ಲಿ ಬ್ಯಾಂಕ್ ಶುಲ್ಕಗಳ ಮರುಪಾವತಿ. ಗರಿಷ್ಠ ಘಟಕವೊಂದಕ್ಕೆ ರೂ.1ಲಕ್ಷ |
| ಇಸಿಜಿಸಿ ಶುಲ್ಕ | ಎಲ್ಲಾ ವಲಯಗಳಲ್ಲಿ ಎಂಎಸ್ಎಂಇಗಳಿಗೆ ಇಸಿಜಿಸಿ (ರಫ್ತು ಸಾಲ ಖಾತರಿ ನಿಗಮ) ಶುಲ್ಕದ ಮರುಪಾವತಿ 100% ವರೆಗೂ; ಗರಿಷ್ಠ ರೂ.1.00 ಲಕ್ಷ/ಘಟಕ/ವರ್ಷ |
| ಪ್ರಮಾಣೀಕರಣ ಶುಲ್ಕ | ಎಲ್ಲಾ ವಲಯಗಳಲ್ಲಿ ಶಾಸನಬದ್ಧ ಪ್ರಮಾಣ ಪತ್ರಗಳಾದ ಸಿಇ (ಚಾರ್ಟರ್ಡ್ ಎಂಜಿನಿಯರ್ ಸರ್ಟಿಫಿಕೇಟ್),ಚೀನಾ ಕಂಪಲ್ಸರಿ ಸರ್ಟಿಫಿಕೇಟ್((ಸಿಸಿಸಿ), ಜಿಎಂಪಿ(ಉತ್ತಮ ಉತ್ಪಾದನಾ ಅಭ್ಯಾಸ), ಫೈಟೋ ಸ್ಯಾನಿಟರಿ ಪ್ರಮಾಣಪತ್ರ, ಐಎಫ್‌ಎಸ್-ಬಿಆರ್‌ಸಿ-ಎಫ್‌ಎಸ್‌ಎಸ್22000 ಪ್ರಮಾಣಪತ್ರಗಳ ಮೇಲಿನ ವೆಚ್ಚದ 50% ಗರಿಷ್ಠ 1.00 ಲಕ್ಷ/ಒಂದು ಘಟಕಕ್ಕೆ ಮರುಪಾವತಿ. |

| ರಫ್ತು ಕೈಗಾರಿಕೆಗಳು | |
|---|---|
| ಯಾವ ರೀತಿಯ ಬೆಂಬಲ | ಎಲ್ಲಾ ಪ್ರವರ್ಗಗಳಿಗೆ |
| ಪ್ರಮಾಣ ಪತ್ರ ಪಡೆಯಲು ಶುಲ್ಕ | ಎಲ್ಲ ವಲಯಗಳಲ್ಲಿ ನವದೆಹಲಿ ಅಥವಾ ಇನ್ನಾವುದೇ ಮಾನ್ಯತೆ ಪಡೆದ ಸಂಸ್ಥೆ ನಡೆಸುವ ಆಮದು-ರಫ್ತು ನಿರ್ವಹಣೆ ಕೋರ್ಸ್‌ಗೆ ಪಾವತಿಸಿದ ಶುಲ್ಕ ಮರುಪಾವತಿ ಕನಿಷ್ಠ 4 ತಿಂಗಳ ಅವಧಿ ಕೋರ್ಸ್‌ಗೆ 50% ಶುಲ್ಕ, ಗರಿಷ್ಠ ರೂ.25,000/ಅಭ್ಯರ್ಥಿ/ಕೋರ್ಸ್‌ಗೆ. ಉತ್ತೇಜನವು ನೀತಿ ಅವಧಿಯಲ್ಲಿ ಒಂದು ಕೋರ್ಸ್‌ಗೆ ಒಂದು ಬಾರಿಗೆ ಲಭ್ಯವಿದ್ದು ಒಂದು ಘಟಕಕ್ಕೆ ಗರಿಷ್ಠ 1.00 ಲಕ್ಷ ರೂ ನೀಡಲಾಗುವುದು. |

## ವಲಯ ವರ್ಗೀಕರಣ

ರಾಜ್ಯದಲ್ಲಿ ಸದೃಡವಾದ ಕೈಗಾರಿಕಾ ಅಡಿಪಾಯವನ್ನು ಹಾಕಲು ಮತ್ತು ರಾಜ್ಯದ ಸಮಗ್ರ ಅಭಿವೃದ್ಧಿಗೆ, ಕೈಗಾರಿಕಾ ಅಭಿವೃದ್ಧಿಯಲ್ಲಿ ಹಿಂದುಳಿದಿರುವುದನ್ನು ಆಧರಿಸಿ, ತಾಲೂಕುಗಳನ್ನು ಗುಂಪುಗಳಾಗಿ ಮಾಡಲಾಗಿದೆ ಮತ್ತು ಪ್ರತ್ಯೇಕ ಪ್ರೋತ್ಸಾಹ/ ರಿಯಾಯಿತಿ ವಲಯಗಳನ್ನಾಗಿ ವಿಂಗಡಿಸಲಾಗಿದೆ. ತಾಲೂಕುಗಳ ವರ್ಗೀಕರಣ ಈ ಕೆಳಗಿನಂತಿದೆ.

| ಸಂ | ಜಿಲ್ಲೆಗಳು | ಒಟ್ಟು ತಾಲೂಕುಗಳು | ವಲಯ 1 | ವಲಯ 2 | ವಲಯ 3 |
|---|---|---|---|---|---|
| 1 | ಬೆಂಗಳೂರು (ನ) | 5 | | | ಆನೇಕಲ್ |
| | | | | | ಬೆಂಗಳೂರು (ಉತ್ತರ) |
| | | | | | ಬೆಂಗಳೂರು (ದಕ್ಷಿಣ) |
| | | | | | ಯಲಹಂಕ |
| | | | | | ಬೆಂಗಳೂರು (ಪೂ) |
| 2 | ಬೆಂಗಳೂರು (ಗ್ರಾ) | 4 | | | ದೇವನಹಳ್ಳಿ |
| | | | | | ದೊಡ್ಡಬಳ್ಳಾಪುರ |
| | | | | | ಹೊಸಕೋಟೆ |
| | | | | | ನೆಲಮಂಗಲ |
| 3 | ರಾಮನಗರ | 5 | | ಮಾಗಡಿ | |
| | | | | ರಾಮನಗರ | |
| | | | | ಚನ್ನಪಟ್ಟಣ | |
| | | | | ಕನಕಪುರ | |
| | | | | ಹಾರೋಹಳ್ಳಿ | |
| 4 | ಚಿತ್ರದುರ್ಗ | 6 | ಹೊಳಲ್ಕೆರೆ | ಹಿರಿಯೂರು | |
| | | | | ಚಿತ್ರದುರ್ಗ | |
| | | | | ಚಳ್ಳಕೆರೆ | |
| | | | | ಹೊಸದುರ್ಗ | |
| | | | | ಮೊಳಕಾಲ್ಮೂರು | |
| 5 | ದಾವಣಗೆರೆ. | 6 | ಚನ್ನಗಿರಿ | ದಾವಣಗೆರೆ | |
| | | | ಜಗಳೂರು | ಹರಿಹರ | |
| | | | ಹೊನ್ನಾಳಿ | ನ್ಯಾಮತಿ | |
| 6 | ಚಿಕ್ಕಬಳ್ಳಾಪುರ | 7 | ಗುಡಿಬಂಡೆ | ಚಿಂತಾಮಣಿ | |
| | | | ಬಾಗೇಪಲ್ಲಿ | ಗೌರಿಬಿದನೂರು | |
| | | | ಚಿಕ್ಕಬಳ್ಳಾಪುರ | ಶಿಡ್ಲಘಟ್ಟ | |
| | | | | ಚೇಳೂರು | |
| 7 | ಕೋಲಾರ | 6 | ಶ್ರೀನಿವಾಸಪುರ | ಬಂಗಾರಪೇಟೆ | |
| | | | | ಕೆಜಿಎಫ್ | |
| | | | | ಕೋಲಾರ | |
| | | | | ಮಾಲೂರು | |
| | | | | ಮುಳಬಾಗಿಲು | |
| 8 | ಶಿವಮೊಗ್ಗ | 7 | ಸೊರಬ | ಸಾಗರ | |
| | | | ಹೊಸನಗರ | ತೀರ್ಥಹಳ್ಳಿ | |
| | | | ಶಿಕಾರಿಪುರ | ಶಿವಮೊಗ್ಗ | |
| | | | | ಭದ್ರಾವತಿ | |
| 9 | ತುಮಕೂರು | 10 | ಮಧುಗಿರಿ | ತುರುವೇಕೆರೆ | |
| | | | ಕೊರಟಗೆರೆ | ಶಿರಾ | |
| | | | ಗುಬ್ಬಿ | ತಿಪಟೂರು | |
| | | | ಪಾವಗಡ | ಕುಣಿಗಲ್ | |
| | | | ಚಿಕ್ಕನಾಯಕನಹಳ್ಳಿ | ತುಮಕೂರು | |
| 10 | ಚಾಮರಾಜನಗರ | 5 | ಯಳಂದೂರು | | |
| | | | ಗುಂಡ್ಲುಪೇಟೆ | | |
| | | | ಹನೂರು | | |
| | | | ಚಾಮರಾಜನಗರ | | |

| ಸಂ | ಜಿಲ್ಲೆಗಳು | ಒಟ್ಟು ತಾಲೂಕುಗಳು | ವಲಯ 1 | ವಲಯ 2 | ವಲಯ 3 |
|---|---|---|---|---|---|
| | | | ಕೊಳ್ಳೇಗಾಲ | | |
| 11 | ಚಿಕ್ಕಮಗಳೂರು | 9 | | ಕಡೂರು | |
| | | | | ಮೂಡಿಗೆರೆ | |
| | | | | ತರೀಕೆರೆ | |
| | | | | ಚಿಕ್ಕಮಗಳೂರು | |
| | | | | ಅಜ್ಜಂಪುರ | |
| | | | | ಶೃಂಗೇರಿ | |
| | | | | ಕೊಪ್ಪ | |
| | | | | ಎನ್.ಆರ್.ಪುರ | |
| | | | | ಕಳಸ | |
| 12 | ದಕ್ಷಿಣಕನ್ನಡ | 9 | | ಬಂಟ್ವಾಳ | |
| | | | | ಸುಳ್ಯ | |
| | | | | ಬೆಳ್ತಂಗಡಿ | |
| | | | | ಪುತ್ತೂರು | |
| | | | | ಮುಲ್ಕಿ | |
| | | | | ಉಳ್ಳಾಲ | |
| | | | | ಮೂಡಬಿದಿರೆ | |
| | | | | ಕಡಬ | |
| | | | | ಮಂಗಳೂರು | |
| 13 | ಹಾಸನ | 9 | ಅರಕಲಗೂಡು | ಆಲೂರು | |
| | | | ಬೇಲೂರು | ಚನ್ನರಾಯಪಟ್ಟಣ | |
| | | | ಅರಸೀಕೆರೆ | ಶಾಂತಿಗ್ರಾಮ | |
| | | | | ಹಾಸನ | |
| | | | | ಹೆಚ್.ಎನ್.ಪುರ | |
| | | | | ಸಕಲೇಶಪುರ | |
| 14 | ಕೊಡಗು | 5 | ಮಡಿಕೇರಿ | | |
| | | | ಸೋಮವಾರಪೇಟೆ | | |
| | | | ವಿರಾಜಪೇಟೆ | | |
| | | | ಪೊನ್ನಂಪೇಟೆ | | |
| | | | ಕುಶಾಲನಗರ | | |
| 15 | ಮಂಡ್ಯ | 7 | | ಶ್ರೀರಂಗಪಟ್ಟಣ | |
| | | | | ಪಾಂಡವಪುರ | |
| | | | | ಮಂಡ್ಯ | |
| | | | | ಮದ್ದೂರು | |
| | | | | ನಾಗಮಂಗಲ | |
| | | | | ಮಳವಳ್ಳಿ | |
| | | | | ಕೆ.ಆರ್.ಪೇಟೆ | |
| 16 | ಮೈಸೂರು | 9 | | ಹುಣಸೂರು | |
| | | | | ಕೆ.ಆರ್.ನಗರ | |
| | | | | ಮೈಸೂರು | |
| | | | | ನಂಜನಗೂಡು | |
| | | | | ಟಿ.ನರಸೀಪುರ | |
| | | | | ಪಿರಿಯಾಪಟ್ಟಣ | |
| | | | | ಹೆಚ್.ಡಿ.ಕೋಟೆ | |
| | ಮೈಸೂರು | | | ಸರಗೂರು | |
| | | | | ಸಾಲಿಗ್ರಾಮ | |
| 17 | ಉಡುಪಿ | 7 | | ಕಾರ್ಕಳ | |
| | | | | ಬ್ರಹ್ಮಾವರ | |

| ಸಂ | ಜಿಲ್ಲೆಗಳು | ಒಟ್ಟು ತಾಲ್ಲೂಕುಗಳು | ವಲಯ 1 | ವಲಯ 2 | ವಲಯ 3 |
|---|---|---|---|---|---|
| | | | | ಉಡುಪಿ | |
| | | | | ಕುಂದಾಪುರ | |
| | | | | ಕಾಪು | |
| | | | | ಹೆಬ್ರಿ | |
| | | | | ಬೈಂದೂರು | |
| 18 | ಬಾಗಲಕೋಟೆ | 10 | ಬೀಳಗಿ | | |
| | | | ಬಾದಾಮಿ | | |
| | | | ಮುಧೋಳ | | |
| | | | ಜಮಖಂಡಿ | | |
| | | | ಹುನಗುಂದ | | |
| | | | ಗುಳೇದಗುಡ್ಡ | | |
| | | | ರಬಕವಿ-ಬನಹಟ್ಟಿ | | |
| | | | ತೇರದಾಳ | | |
| | | | ಇಳಕಲ್ | | |
| | | | ಬಾಗಲಕೋಟೆ | | |
| 19 | ಬೆಳಗಾವಿ | 15 | ಬೈಲಹೊಂಗಲ | | |
| | | | ಸೌಂದತ್ತಿ | | |
| | | | ಚಿಕ್ಕೋಡಿ | | |
| | | | ರಾಯಭಾಗ | | |
| | | | ಖಾನಾಪುರ | | |
| | | | ರಾಮದುರ್ಗ | | |
| | | | ಹುಕ್ಕೇರಿ | | |
| | | | ಅಥಣಿ | | |
| | | | ಗೋಕಾಕ್ | | |
| | | | ನಿಪ್ಪಾಣಿ | | |
| | | | ಕಾಗವಾಡಿ | | |
| | | | ಮೂಡಲಗಿ | | |
| | | | ಯರಗಟ್ಟಿ | | |
| | | | ಕಿತ್ತೂರು | | |
| | | | ಬೆಳಗಾವಿ | | |
| 20 | ವಿಜಯಪುರ | 13 | ಸಿಂಧಗಿ | | |
| | | | ಇಂಡಿ | | |
| | | | ಮುದ್ದೇಬಿಹಾಳ | | |
| | | | ಬಿ.ಬಾಗೇವಾಡಿ | | |
| | | | ಆಲಮೇಲ | | |
| | | | ಬಬಲೇಶ್ವರ | | |
| | | | ನಿಡಗುಂದಿ | | |
| | | | ಟಿಕೋಟ | | |
| | | | ಚಡಚಣ | | |
| | | | ಕೋಲ್ಹಾರ | | |
| | | | ದೇವರಹಿಪ್ಪರಗಿ | | |
| | | | ತಾಳೀಕೋಟೆ | | |
| | ವಿಜಯಪುರ | | ವಿಜಯಪುರ | | |
| 21 | ಧಾರವಾಡ | 8 | ನವಲಗುಂದ | | |
| | | | ಕಲಘಟಗಿ | | |
| | | | ಕುಂದಗೋಳ | | |
| | | | ಅಣ್ಣಿಗೇರಿ | | |
| | | | ಅಳ್ನಾವರ | | |

| ಸಂ | ಜಿಲ್ಲೆಗಳು | ಒಟ್ಟು ತಾಲ್ಲೂಕುಗಳು | ವಲಯ 1 | ವಲಯ 2 | ವಲಯ 3 |
|---|---|---|---|---|---|
| | | | ಹುಬ್ಬಳ್ಳಿ (ಗ್ರಾ) | | |
| | | | ಧಾರವಾಡ | | |
| | | | ಹುಬ್ಬಳ್ಳಿ (ನ) | | |
| | | | ಮುಂಡರಗಿ | | |
| | | | ನರಗುಂದ | | |
| | | | ರೋಣ | | |
| 22 | ಗದಗ | 7 | ಶಿರಹಟ್ಟಿ | | |
| | | | ಗಜೇಂದ್ರಗಢ | | |
| | | | ಲಕ್ಷ್ಮೇಶ್ವರ | | |
| | | | ಗದಗ | | |
| | | | ಸವಣೂರು | | |
| | | | ಶಿಗ್ಗಾಂವಿ | | |
| | | | ಹಿರೇಕೆರೂರು | | |
| 23 | ಹಾವೇರಿ | 8 | ಹಾನಗಲ್ | | |
| | | | ರಾಣೆಬೆನ್ನೂರು | | |
| | | | ಬ್ಯಾಡಗಿ | | |
| | | | ರಟ್ಟಿಹಳ್ಳಿ | | |
| | | | ಹಾವೇರಿ | | |
| | | | ಹೊನ್ನಾವರ | | |
| | | | ಶಿರಸಿ | | |
| | | | ಮುಂಡಗೋಡ | | |
| | | | ಯಲ್ಲಾಪುರ | | |
| | | | ಸಿದ್ದಾಪುರ | | |
| 24 | ಉತ್ತರಕನ್ನಡ | 12 | ಹಳಿಯಾಳ | | |
| | | | ಜೋಯಿಡಾ | | |
| | | | ಭಟ್ಕಳ | | |
| | | | ಅಂಕೋಲಾ | | |
| | | | ಕುಮಟಾ | | |
| | | | ದಾಂಡೇಲಿ | | |
| | | | ಕಾರವಾರ | | |
| | | | ಹೆಚ್.ಬಿ.ಹಳ್ಳಿ | | |
| | | | ಹಡಗಲಿ | | |
| | | | ಕೂಡ್ಲಿಗಿ | | |
| | ಬಳ್ಳಾರಿ | | ಹೊಸಪೇಟೆ | | |
| | | | ಸಂಡೂರು | | |
| 25 | | 11 | ಶಿರಗುಪ್ಪ | | |
| | | | ಹರಪನಹಳ್ಳಿ | | |
| | | | ಕುರುಗೋಡು | | |
| | ಬಳ್ಳಾರಿ | | ಕೊಟ್ಟೂರು | | |
| | | | ಕಂಪ್ಲಿ | | |
| | | | ಬಳ್ಳಾರಿ | | |
| | | | ಬಾಲ್ಕಿ | | |
| | | | ಹುಮ್ನಾಬಾದ್ | | |
| | | | ಬಸವಕಲ್ಯಾಣ | | |
| 26 | ಬೀದರ್ | 8 | ಔರಾದ್ | | |
| | | | ಚಿಟಗುಪ್ಪ | | |
| | | | ಹುಲಸೂರು | | |
| | | | ಕಮಲಾನಗರ | | |

| ಕ್ರ.ಸಂ | ಜಿಲ್ಲೆಗಳು | ಒಟ್ಟು ತಾಲೂಕುಗಳು | ವಲಯ 1 | ವಲಯ 2 | ವಲಯ 3 |
|---|---|---|---|---|---|
| | | | ಬೀದರ್ | | |
| 27 | ಕಲಬುರ್ಗಿ | 11 | ಆಫ್ಜಲ್‌ಪುರ | | |
| | | | ಆಳಂದಾ | | |
| | | | ಜೇವರ್ಗಿ | | |
| | | | ಸೇಡಂ | | |
| | | | ಚಿತ್ತಾಪುರ | | |
| | | | ಚಿಂಚೋಳಿ | | |
| | | | ಕಲಗಿ | | |
| | | | ಕಮ್ಲಾಪುರ | | |
| | | | ಯಡ್ರಾಮಿ | | |
| | | | ಶಹಾಬಾದ್ | | |
| | | | ಕಲಬುರ್ಗಿ | | |
| 28 | ಯಾದಗಿರಿ | 6 | ಯಾದಗಿರಿ | | |
| | | | ಷಹಾಪುರ್ | | |
| | | | ಶೋರಾಪುರ್ | | |
| | | | ಹುಣಸಗಿ | | |
| | | | ವಡಗೇರ | | |
| | | | ಗುರುಮಿಟಕಲ್ | | |
| 29 | ಕೊಪ್ಪಳ | 7 | ಕುಷ್ಟಗಿ | | |
| | | | ಯಲಬುರ್ಗ | | |
| | | | ಗಂಗಾವತಿ | | |
| | | | ಕುಕ್ನೂರು | | |
| | | | ಕರಟಗಿ | | |
| | | | ಕನಕಗಿರಿ | | |
| | | | ಕೊಪ್ಪಳ | | |
| 30 | ರಾಯಚೂರು | 7 | ಸಿಂಧನೂರು | | |
| | | | ಮಾನ್ವಿ | | |
| | | | ಲಿಂಗಸಗೂರು | | |
| | | | ದೇವದುರ್ಗ | | |
| | | | ಮಸ್ಕಿ | | |
| | | | ಸಿರವಾರ | | |
| | | | ರಾಯಚೂರು | | |
| | ಒಟ್ಟು | 239 | 152 | 78 | 9 |